ವಿವಿಧ ವಿನ್ಯಾಸಗಳ ಬಾಟಮ್‌ಗಳ ಬೆಲೆ ಬಹಳ ದುಬಾರಿ. ಎಲ್ಲ ಗ್ರಾಹಕರೂ ಒಂದೇ ಎಂದು ಅಂದುಕೊಂಡಿರುತ್ತಾರೆ.

ಫ್ಯಾಷನ್ ಡಿಸೈನ್ ಲೋಕದಲ್ಲಿ ಆಗುತ್ತಿರುವ ವೇಗದ ಬದಲಾವಣೆಗೆ ಹೊಂದಿಕೊಳ್ಳುವ ಹೆಚ್ಚು ಮಂದಿಗಾಗಿ, ಒಂದೇ ಮಾದರಿ ಅಥವಾ ಇದ್ದುದರಲ್ಲಿ ತಮಗೊಪ್ಪುವಂತಹ ಉಡುಪುಗಳನ್ನು ಅರಸುವ ಕಡಿಮೆ ಸಂಖ್ಯೆಯ ಗ್ರಾಹಕರಿಗೆ ಮಾರುಕಟ್ಟೆಯಲ್ಲಿ ಪ್ರಯಾಸಪಟ್ಟು ಹುಡುಕಾಡಬೇಕಾದ ಪರಿಸ್ಥಿತಿ ಎದುರಾಗಿದೆ.

1960–70ರ ದಶಕದಲ್ಲಿ ಸಿನಿಮಾ ಮತ್ತು ಮುದ್ರಣ ಮಾಧ್ಯಮಗಳು ದೇಶದಾದ್ಯಂತ 'ಚೂಡಿದಾರ್–ಕಮೀಜ್' ಜನಪ್ರಿಯಗೊಳಿಸುವಲ್ಲಿ ಮಹತ್ವದ ಪಾತ್ರ ವಹಿಸಿದವು. ಪ್ರಸಿದ್ಧ ಸಿನಿಮಾ ನಟಿ ಸಾಧನಾ ಮತ್ತು ವಸ್ತ್ರ ವಿನ್ಯಾಸಕರಾದ ಭಾನು ಅಥಯ ಹೊಸ ಬಗೆಯ ಚರ್ಮಕ್ಕೆ ಅಂಟಿಕೊಳ್ಳುವಷ್ಟು ಬಿಗಿಯಾದ ಉಡುಪುಗಳ ವಿನ್ಯಾಸವನ್ನು, ಪಾಶ್ಚಿಮಾತ್ಯ ಟೈಲರಿಂಗ್ ತಂತ್ರಗಳನ್ನು ಪರಿಚಯಿಸಿದರು.

ಎಂಬತ್ತರ ದಶಕದಲ್ಲಿ ಎದ್ದು ಕಾಣುವ ಉದ್ದನೆ ತೋಳುಗಳ ಚೂಡಿದಾರ್, ತೊಂಬತ್ತರ ದಶಕದಲ್ಲಿ 'ಸಲ್ವಾರ್–ಕಮೀಜ್' ಪಟ್ಟಿಯುಳ್ಳ ಉದ್ದನೆ ನಿಲುವಂಗಿ, ಅವರವರ ಇಚ್ಛೆ ಹಾಗೂ ಅನುಕೂಲಕ್ಕೆ ತಕ್ಕಂತೆ ತೋಳನ್ನಲಂಕರಿಸುವ ತೆಳುವಾದ ದುಪಟ್ಟಾಗಳು ಚಲಾವಣೆಗೆ ಬಂದವು. ಮಾಧುರಿ ದೀಕ್ಷಿತ್‌ಳ 'ದಿಲ್ ತೋ ಪಾಗಲ್ ಹೇ' ಚಿತ್ರದಲ್ಲಿ ಈ ರೀತಿಯ ಉಡುಪು ಪ್ರಸಿದ್ಧವಾಯಿತು. ನಂತರದ ವರ್ಷಗಳಲ್ಲಿನ ಸಿನಿಮಾಗಳು ಹಾಗೂ ಫ್ಯಾಷನ್ ಡಿಸೈನರ್ ಪ್ರಭಾವದಿಂದ ಶಾರ್ಟ್ 'ಕುರ್ತಾ'ಗಳಿಗೆ ದೊಗಲೆ 'ಸಲ್ವಾರ್' ತೊಡುವುದು ಚಾಲ್ತಿಗೆ ಬಂದಿತು. ನಂತರದಲ್ಲಿ, ಕರೀನಾಕಪೂರ್, ರಾಣಿ ಮುಖರ್ಜಿ 'ಕುರ್ತಾ'ಗಳಿಗೆ ಪಟಿಯಾಲ ಪ್ಯಾಂಟ್, ಟಿ–ಷರ್ಟ್ ತೊಡುವುದರ ಮೂಲಕ ಹೊಸ ಬಗೆ ಪರಿಚಯಿಸಿದರು. ಪ್ರಸ್ತುತ 'ಸಲ್ವಾರ್–ಕಮೀಜ್' ಜಾಗದಲ್ಲಿ ಶಾರ್ಟ್ 'ಕುರ್ತಾ'ಗಳಿಗೆ ದೊಗಲೆ ಪ್ಯಾಂಟ್‌ಗಳು ಚಲಾವಣೆಗೆ ಬಂದಿವೆ. ಅದ್ದೂರಿ ಸಮಾರಂಭಗಳಿಗೆ 'ಅನಾರ್ಕಲಿ'ಗಳು ಹೊಸ ಟ್ರೆಂಡ್ ಸೃಷ್ಟಿಸಿವೆ. ಇವೆಲ್ಲವುಗಳ ಪರಿಣಾಮ 'ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕಿದರು' ಎಂಬಂತಾಗಿದೆ ನಮ್ಮಂತಹ ಗ್ರಾಹಕರ ಪರಿಸ್ಥಿತಿ.

ಗಾಂಧಿ ಬಜಾರಿನಲ್ಲಿ ಮಾಮೂಲಿಯಾಗಿ ಹೋಗುವ ಪರಿಚಯದ ಅಂಗಡಿಗೆ ಹೋದರೆ ಅಂಗಡಿಯವನು, 'ನಾರ್ಮಲ್ ಚೂಡಿದಾರ್ ಪ್ಯಾಂಟ್‌ಗಳಿಲ್ಲ ಮೇಡಂ. ಈ ಟಾಪ್‌ಗಳಿಗೆ ಪಲಾಜೊ ಚೆನ್ನಾಗಿರುತ್ತೆ' ಎಂದು ಬಗೆಬಗೆಯಲ್ಲಿ ವರ್ಣಿಸಿ, 'ಒಮ್ಮೆ ತೆಗೆದುಕೊಂಡು ನೋಡಿ' ಎಂದು ಹೇಳಿದ. 'ಇಲ್ಲ, ಇಷ್ಟು ದೊಗಲೆಯಾಗಿದೆ, ನನಗೆ ಬೇಡ' ಎಂದರೂ, 'ಈಗೆಲ್ಲ ಇದೇ ಟ್ರೆಂಡ್. ಒಮ್ಮೆ ಟ್ರೈ ಮಾಡಿ, ಇಷ್ಟವಾಗದಿದ್ದರೆ ಇದರಲ್ಲೇ ಚಿಕ್ಕ ಸೈಜ್ ನೆಕ್ಸ್ಟ್ ವೀಕ್ ಬರುತ್ತೆ' ಎಂದು ಒತ್ತಾಯಿಸಿ ಕೊಟ್ಟ.



ಸರಿ, ಒಮ್ಮೆ ನೋಡೋಣ, ಸೆಟ್ ಆಗದಿದ್ದರೆ ನಾರ್ಮಲ್ ಪ್ಯಾಂಟ್ ತೆಗೆದುಕೊಳ್ಳೋಣವೆಂದು ತಂದದ್ದಾಯಿತು.

ಮರುದಿನ ಹಾಕಿ ನೋಡಿದರೆ ಬಟ್ಟೆ ಮೈಯಿಗಂಟದೆ ಗಾಳಿಯಲ್ಲಿ ತೇಲುತ್ತಿರುವಂತೆ ಹರಡಿಕೊಂಡು ನಡೆಯಲು ಕಿರಿಕಿರಿಯಾಗುವಷ್ಟು ಉದ್ದವಾಗಿದೆ. ಅಯ್ಯೋ, ಇದೇನು ಹೀಗಾಯಿತಲ್ಲ ಎಂದುಕೊಂಡು ತಂದುದರಲ್ಲಿ ಒಂದು ಪಲಾಜೊ ಪರಿಚಯದ ಟೈಲರಿಗೆ ಕೊಟ್ಟು, ಟೈಟ್ ಹಾಗೂ ಉದ್ದ ಕಡಿಮೆ ಮಾಡುವಂತೆ ಕೊಟ್ಟರೆ, ಅದನ್ನು ಒಂದಷ್ಟು ಕಟ್ ಮಾಡಿ ಟೈಟ್ ಮಾಡಿಕೊಟ್ಟರು. ಅದು ಹಾಕಿಕೊಂಡರೆ ನಡುವೆ ಮಧ್ಯಭಾಗ ಕೊಯ್ದುಕೊಳ್ಳುವಷ್ಟು ಟೈಟಾಗಿದೆ! ಇನ್ನೊಂದು ಪ್ಯಾಂಟ್ ಇನ್ನೊಬ್ಬ ಟೈಲರಿಗೆ ಕೊಟ್ಟು, 'ಇದನ್ನು ಕಟ್ ಮಾಡಬೇಡಿ. ಅರ್ಧ ಅಥವಾ ಒಂದು ಇಂಚು ಮಡಚಿ ರಿಸ್ಟಿಚ್ ಮಾಡಿಕೊಡಿ' ಎಂದು ಕೇಳಿ ಮಾಡಿಸಿದ್ದಾಯಿತು. ಅದೂ ದೇಹಕ್ಕೆ ಹಿತ ಸ್ಪರ್ಶವಾಗಲಿಲ್ಲ.

ಮತ್ತೊಮ್ಮೆ ಮೆಜೆಸ್ಟಿಕ್ ಕಡೆಗೆ ಪ್ರಯಾಣ ಬೆಳೆಸಿದಾಗ ಮೈಸೂರ್ ಬ್ಯಾಂಕ್ ವೃತ್ತದಲ್ಲಿಳಿದು, ಮುಖ್ಯರಸ್ತೆಯಲ್ಲಿರುವ ಅಂಗಡಿಗೆ ಹೋಗಿ ವಿಚಾರಿಸಿದೆ. ಇಲ್ಲಿ ಬರೀ ಟಾಪ್‌ಗಳು ಇರೋದು ಎಂದಾಗ ನನ್ನ ಮುಖ 'ಇಂಗು ತಿಂದ ಮಂಗನಂತಾಯಿತು', ಆದರೆ ಅದೇ ಅಂಗಡಿಯ ಎದುರಿನ ಮೂಲೆಯ ಅಂಗಡಿಯಲ್ಲಿ ಬೊಂಬೆಗೆ ತೊಡಿಸಿದ್ದ ಬಾಟಮ್ ನನ್ನ ಕಣ್ ಸೆಳೆಯಿತು. ಗಾಂಧಿಬಜಾರಿನ ಅಂಗಡಿಯಲ್ಲಿ ನೋಡಿದುದಕ್ಕಿಂತ ಮಟ್ಟಸವಾದ ಪಲಾಜೊ ಇದ್ದಂತಿದೆ, ಇಲ್ಲಿ ಸರಿಯಾದ ಪಲಾಜೊ ಸಿಗಬಹುದು ಎಂದು ಸಂತಸದಿಂದ ಒಳಗೆ ಹೋಗಿ ಕೇಳಿದಾಗ, 'ಪಲಾಜೊ ಕಲೆಕ್ಷನ್ ಫಸ್ಟ್ ಫ್ಲೋರ್ ಮೇಡಂ' ಎಂದಾಗ ಆಕಾಶಕ್ಕೆ ಒಂದೇ ಗೇಣು ಎಂಬಂತೆ ಧಾವಿಸಿ ಹೋದೆ. ಒಂದಷ್ಟು ವಿನ್ಯಾಸದ, ಬಣ್ಣಬಣ್ಣದ ಮಟ್ಟಸದ ಎಲಾಸ್ಟಿಕ್ ಪಲಾಜೊ ತೋರಿಸಿದಳು. ಆದರೆ ನಾನು ಹುಡುಕುತ್ತಿದ್ದುದು ಲಾಡಿ ಇರುವ ಪಲಾಜೊ!

ಸ್ವಾಮಿ ವಿವೇಕಾನಂದರು 'ಏಳಿ ಎದ್ದೇಳಿ, ಗುರಿ ಮುಟ್ಟುವ ತನಕ ನಿಲ್ಲದಿರಿ' ಎಂದು ಹೇಳಿದ್ದಾರೆ, ನಾವು ಕೈಕಟ್ಟಿ ಕೂರಲಾದೀತೇ? ಈ ಬಾರಿ ಜಯನಗರ ಕಾಂಪ್ಲೆಕ್ಸ್‌ನತ್ತ ಪಾದ ಬೆಳೆಸಿದ್ದಾಯಿತು. ಅದೃಷ್ಟವೆಂಬಂತೆ ನನ್ನ ಬಹುತೇಕ ಟಾಪ್‌ಗಳಿಗೆ ನಾನು ಹುಡುಕುತ್ತಿದ್ದ ಸಲ್ವಾರ್‌ಗಳು (ನಮ್ಮ ಭಾಷೆಯಲ್ಲಿ ಚೂಡಿದಾರ್ ಪ್ಯಾಂಟ್‌ಗಳು) ಸಿಕ್ಕಿದವು. ಉಳಿದವಕ್ಕೆ ಅಲ್ಲೇ ಮಟ್ಟಸವಾಗಿದ್ದ ಪಲಾಜೊಗಳು ಇನ್ನೊಂದು ಅಂಗಡಿಯಲ್ಲಿ ಸಿಕ್ಕವು. ಕೊನೆಗೂ ಬಾಟಮ್ ಭಾಗ್ಯ ಪ್ರಾಪ್ತವಾಗಿ ಆಕಾಶದಲ್ಲಿ ತೇಲಾಡುವಂತಾಗಿದೆ!

ಪ್ರತಿಕ್ರಿಯಿಸಿ:
**feedback@sudha.co.in**